# ARTICLE IN KANNADA LANGUAGE MONTHLY MAGAZINE **SANKETHI SANGAMA** (OCT 2017) CELBRATING TITLE OF INTERNATIONAL EYE HEALTH HERO AWARD TO DR.UMA RAVISHANKAR

ಹೇವಿಳಂಬಿ ಆಶ್ವಯುಜ ಅಕ್ಟೋಬರ್ 2017

# ಸಂಕೇತಿ ಸಂಗಮ

ಸಂಕೇತಿ ಕನ್ನಡ ಮಾಸಪತ್ರಿಕೆ ಬೆಲೆ ರೂ. 10/-




## “ಐ ಹೆಲ್ತ್ ಹೀರೋ 2017”
## ಪ್ರಶಸ್ತಿ ಪುರಸ್ಕೃತ ವೈದ್ಯ ದಂಪತಿಗಳು

# "ಐ ಹೆಲ್ತ್ ಹೀರೋ 2017"
# ಪ್ರಶಸ್ತಿ ಪುರಸ್ಕೃತ ವೈದ್ಯ ದಂಪತಿಗಳು

ಮೈಸೂರಿನ ಉಷಾಕಿರಣ್ ಆಸ್ಪತ್ರೆಯ ನೇತ್ರವೈದ್ಯ ದಂಪತಿಗಳಾದ ಡಾ॥ ರವಿಶಂಕರ್ ಮತ್ತು ಡಾ॥ ಉಮಾ ವೈದ್ಯನಾಥನ್ ಅವರುಗಳು ನೇತ್ರಚಿಕಿತ್ಸಾ ಕ್ಷೇತ್ರದಲ್ಲಿ ಕಳೆದೆರಡು ದಶಕಗಳಿಂದ ವಿಶೇಷ ರೀತಿಯಾದ ಸೇವೆ ಸಲ್ಲಿಸುತ್ತಿದ್ದಾರೆ. ದೃಷ್ಟಿದೋಷವುಳ್ಳವರಿಗೆ ಹಾಗೂ ದೃಷ್ಟಿಭಾಗ್ಯದಿಂದ ವಂಚಿತರಾದವರಿಗೆ ಸೇವಾಮನೋಭಾವದಿಂದ ಚಿಕಿತ್ಸೆ ನೀಡುತ್ತ ಅಂತಹವರ ಬಾಳಿನಲ್ಲಿ ಬೆಳಕು ಮೂಡಿಸುತ್ತಿದ್ದಾರೆ. ಅದರಲ್ಲೂ ವಿಶೇಷವಾಗಿ ಆಧುನಿಕ ಸೌಲಭ್ಯಗಳಿಂದ ವಂಚಿತರಾಗಿರುವ ಕೆಳಮಧ್ಯಮ ಮತ್ತು ಕೆಳವರ್ಗದ ಜನರನ್ನು ವಿಶೇಷವಾಗಿ ದೃಷ್ಟಿಯಲ್ಲಿರಿಸಿಕೊಂಡು ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಕೇವಲ ನಮ್ಮ ದೇಶದ ಬೇರೆ ಬೇರೆ ಪ್ರದೇಶದಲ್ಲಲ್ಲದೆ ವಿದೇಶಗಳಲ್ಲೂ ನೇತ್ರ ಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದಾರೆ. ಈವರೆಗೆ ಸುಮಾರು 1200 ನೇತ್ರಚಿಕಿತ್ಸಾ ಶಿಬಿರಗಳನ್ನು ನಡೆಸಿರುವ ಇವರು 2 ಲಕ್ಷಕ್ಕೂ ಅಧಿಕ ನೇತ್ರರೋಗಿಗಳಿಗೆ ಚಿಕಿತ್ಸೆ ನೀಡಿದ್ದಾರೆ ಹಾಗೂ 50ಸಾವಿರಕ್ಕೂ ಹೆಚ್ಚು ನೇತ್ರಶಸ್ತ್ರಚಿಕಿತ್ಸೆಗಳನ್ನು ಮಾಡಿದ್ದಾರೆ. ಸುಮಾರು 12,500ಕ್ಕೂ ಅಧಿಕ ನೇತ್ರರೋಗಿಗಳಿಗೆ ಉಚಿತ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಾರೆ. ಇದಲ್ಲದೆ ಸುಮಾರು 2ಲಕ್ಷ ಶಾಲಾಮಕ್ಕಳಿಗೆ ನೇತ್ರತಪಾಸಣೆ ನಡೆಸಿ ಅವರಲ್ಲಿ ಅಗತ್ಯವಿರುವ 7,000 ಮಕ್ಕಳಿಗೆ ಕನ್ನಡಕಗಳನ್ನು ಒದಗಿಸಿದ್ದಾರೆ. ವಿವಿಧ ರೀತಿಯ ನೇತ್ರದೋಷಗಳಿಂದ ಬಳಲುತಿದ್ದ 1,000ಕ್ಕೂ ಅಧಿಕ ಮಕ್ಕಳಿಗೆ ನೇತ್ರಶಸ್ತ್ರಚಿಕಿತ್ಸೆ ಮಾಡಿರುವುದು ಇವರ ಹೆಗ್ಗಳಿಕೆ.

ರವಿಶಂಕರ್–ಉಮಾ ವೈದ್ಯದಂಪತಿಗಳು ಪ್ರತಿ ತಿಂಗಳೂ ನೇತ್ರಚಿಕಿತ್ಸಾ ಶಿಬಿರಗಳನ್ನು ನಡೆಸುವಲ್ಲಿ ತಮ್ಮ ಅಮೂಲ್ಯ ಸಮಯವನ್ನು ವಿನಿಯೋಗಿಸುತ್ತಿದ್ದಾರೆ. ರೋಟರಿ ಸಂಸ್ಥೆಯೊಂದಿಗೂ ಕೈಜೋಡಿಸಿರುವ ಈ ದಂಪತಿಗಳು ಮೈಸೂರಿನಲ್ಲಿ ಉಷಾಕಿರಣ್ ಚಾರಿಟಬಲ್ ಟ್ರಸ್ಟ್ ಮೂಲಕ ನೇತ್ರಚಿಕಿತ್ಸೆಗೆ ಸಂಬಂಧಿಸಿದ ವಿಶೇಷ ಉಪನ್ಯಾಸಗಳು, ವಿಶೇಷ ಶಿಬಿರಗಳು ಹಾಗೂ ಶಸ್ತ್ರಚಿಕಿತ್ಸೆಗಳನ್ನು ನಡೆಸುತ್ತ ತಮ್ಮ ಪರಿಣತಿ ಮತ್ತು ಅನುಭವಗಳನ್ನು ಸಮಾಜಸೇವೆಗಾಗಿ ವಿನಿಯೋಗಿಸುತ್ತಿದ್ದಾರೆ. ಮೈಸೂರಿನಲ್ಲಿ ಉಷಾಕಿರಣ್ ಕಣ್ಣಿನ






ಆಸ್ಪತ್ರೆ ನಡೆಸುತ್ತ ಆ ಭಾಗದ ಜನರ ಅಗತ್ಯಗಳಿಗೆ ಸ್ಪಂದಿಸುತ್ತಿದ್ದಾರೆ.

ಇತ್ತೀಚೆಗೆ ನೇಪಾಳದ ಕಠ್ಮಂಡುವಿನಲ್ಲಿ ಇವರ ಎಲ್ಲ ಸಾಧನೆಗಳನ್ನು ಗುರುತಿಸಿ "ಐ ಹೆಲ್ತ್ ಹೀರೋ 2017" ಎಂಬ ವಿಶೇಷ ಪ್ರಶಸ್ತಿಯನ್ನು ಡಾ। ಉಮಾ-ರವಿಶಂಕರ್ ಅವರಿಗೆ ಪ್ರದಾನ ಮಾಡಿ ಗೌರವಿಸಿದರು. ನಿಜಕ್ಕೂ ಸಂಕೇತಿಗಳೆಲ್ಲ ಹೆಮ್ಮೆ ಪಡಬೇಕಾದ ಸಂದರ್ಭವಿದು. ಈ ಬಗೆಗೆ ಡಾ। ರವಿಶಂಕರ್-ಡಾ। ಉಮಾ ಅವರನ್ನು ಅಭಿನಂದಿಸಿ ದಾಗ ಅವರು ಪ್ರತಿಕ್ರಿಯಿಸಿದ್ದು ಹೀಗೆ. "ನಿಮ್ಮ ಅಭಿಮಾನದ ಅಭಿನಂದನೆಗಳಿಗೆ ಕೃತಜ್ಞತೆಗಳು, ಯಾರಿಗೆ ಇಂತಹ ಚಿಕಿತ್ಸೆಗಳನ್ನು ಪಡೆದುಕೊಳ್ಳುವ ಆರ್ಥಿಕಶಕ್ತಿ ಇರುವುದಿಲ್ಲವೋ ಅಂತಹವರಿಗೆ ಬೆಳಕಿನ ಭಾಗ್ಯವನ್ನು ಶಸ್ತ್ರಚಿಕಿತ್ಸೆಯ ಮೂಲಕ ನೀಡುವುದಕ್ಕಿಂತ ಹೆಚ್ಚಿನ ಸಂತೋಷ ಬೇರೊಂದಿಲ್ಲ. ವಿಶೇಷವಾಗಿ ಮಕ್ಕಳ ದೃಷ್ಟಿದೋಷಗಳನ್ನು ಪರಿಹರಿಸುವಂತಹ ಚಿಕಿತ್ಸೆಗಳನ್ನು ನೀಡಿದಾಗ ಮಕ್ಕಳ ತಂದೆ-ತಾಯಂದಿರು ಹಾಗೂ ಅಜ್ಜ-ಅಜ್ಜಿಯರು ಪಡುವ ಸಂತಸ ನಮ್ಮ ಜೀವನ ಸಾರ್ಥಕ ಎನಿಸುವಂತೆ ಮಾಡುತ್ತವೆ." ನಿಜಕ್ಕು ಈ ವೈದ್ಯ ದಂಪತಿಗಳ ಸೇವೆ ಅಭಿನಂದನೀಯ ಹಾಗೂ ಅನುಕರಣೀಯ.

ಡಾ। ಕೆ.ವಿ. ರವಿಶಂಕರ್ ಅವರು ಕೌಶಿಕದ ಶ್ರೀ ಕೆ.ಎಲ್. ವೆಂಕಟಸುಬ್ಬಯ್ಯ, ನಿವೃತ್ತ ಅಂಚೆ ಪಾಲಕರು, ಹಾಸನ ಮತ್ತು ಸಂಗೀತ ಹಾಗೂ ಗಮಕವಿದುಷಿ ಶ್ರೀಮತಿ ವಸಂತಲಕ್ಷ್ಮೀ ಅವರ ಸುಪುತ್ರರು. ಇವರ ವಿದ್ಯಾಭ್ಯಾಸ ಪಿ.ಯು.ಸಿ.ವರೆಗೆ ಹಾಸನದಲ್ಲಿ ನಡೆಯಿತು. ನಂತರ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ MBBS ನಂತರ ಚೆನ್ನೈನ ಸುಪ್ರಸಿದ್ಧ ಶಂಕರ ನೇತ್ರಾಲಯದಲ್ಲಿ ಕಣ್ಣಿನ ರೆಟಿನಾ ಮತ್ತು ವಿಟ್ರಿಯಸ್ ಶಸ್ತ್ರಚಿಕಿತ್ಸೆಗಳಲ್ಲಿ ಹೆಚ್ಚಿನ ವ್ಯಾಸಂಗವನ್ನು (D.O.M.S., DNB, F.M.R.F.) ಉನ್ನತ ಶ್ರೇಣಿಯಲ್ಲಿ ಮುಗಿಸಿ, ಅಲ್ಲಿಯೇ ಐದು ವರ್ಷಗಳ ಕಾಲ ಸಲಹೆಗಾರರಾಗಿ ಶಸ್ತ್ರಚಿಕಿತ್ಸೆಯಲ್ಲಿ ತೊಡಗಿಕೊಂಡಿದ್ದರು. ಭಾರತ ದಲ್ಲಿಯೇ ಹೆಸರುವಾಸಿಯಾಗಿರುವ ಡಾ। ಎಸ್.ಎಸ್. ಬದರೀನಾಥ್ ಅವರ ಜತೆಯಲ್ಲಿ ಕೆಲಸ ಮಾಡಿ ತಮ್ಮ ಅನುಭವವನ್ನು ಹೆಚ್ಚಿಸಿ ಕೊಂಡರು. ಇದರ ಜತೆಗೆ ಡಾ। ರವಿಶಂಕರ್ ಅವರು ಇಂಗ್ಲೆಂಡಿನ F.R.C.S. ಪದವಿಯನ್ನೂ ಪಡೆದಿದ್ದಾರೆ. ರೆಟಿನಾ



**ಉಷಾಕಿರಣ್ ಕಣ್ಣಿನ ಆಸ್ಪತ್ರೆ**
ದಿವಾನ್ಸ್ ರೋಡ್, ಲಕ್ಷ್ಮೀಪುರಂ,
ಮೈಸೂರು
ದೂರವಾಣಿ- 0821 2334777/2334499
ಮೊಬೈಲ್ - 98459 71425



ಚಿಕಿತ್ಸೆಯಲ್ಲಿ ವಿಶ್ವವಿಖ್ಯಾತ ರಾದ ಬೆಲ್ಜಿಯಮ್‌ನ ಡಾ। ಝುವೋಗ್ನವಿಕ್ ಅವರೊಂದಿಗೆ ಕೂಡಾ ಕೆಲಸ ಮಾಡುವ ಅಪೂರ್ವ ಸದವಕಾಶ ಇವರಿಗೆ ದೊರೆತಿದೆ.

ಡಾ। ಉಮಾ ಅವರು ಚೆನ್ನೈನಲ್ಲಿ ವಾಸವಾಗಿರುವ ಶ್ರೀಮತಿ ರಾಧಾ ಮತ್ತು ಶ್ರೀ ವೈದ್ಯನಾಥನ್ ಅವರ ಸುಪುತ್ರಿ. ಇವರ ಶಾಲಾ ವಿದ್ಯಾಭ್ಯಾಸ ಅಸ್ಸಾಂ, ಮುಂಬಯಿ ಮತ್ತು ಅಬುಧಾಬಿಗಳಲ್ಲಿ ಜರುಗಿತು. ನಂತರ ವೈದ್ಯಕೀಯ ಶಿಕ್ಷಣವನ್ನು ಚೆನ್ನೈನ ರಾಮಚಂದ್ರ ಮೆಡಿಕಲ್ ಕಾಲೇಜಿನಲ್ಲಿ ಮತ್ತೆ ಕಣ್ಣಿನ ಶಸ್ತ್ರಚಿಕಿತ್ಸೆಯ D.N.B. ಪದವಿಗಳನ್ನು ಚೆನ್ನೈನ ಶಂಕರ ನೇತ್ರಾಲಯದಲ್ಲಿ ಪಡೆದರು. ಇದರ ಜತೆ ಹೈದರಾಬಾದ್‌ನ ಎಲ್.ವಿ. ಪ್ರಸಾದ್ ಐ ಇನ್ಸ್ಟಿಟ್ಯೂಟ್‌ನಲ್ಲಿ ಕಾರ್ನಿಯಾ ರೋಗಗಳ ಬಗ್ಗೆ ಫೆಲೋಶಿಪ್ ಕೂಡ ಪಡೆದಿದ್ದಾರೆ. ಇಂಗ್ಲೆಂಡ್‌ನಲ್ಲಿ ಉನ್ನತ ಪದವಿ F.R.C.S. ಗಳಿಸಿ ಹೆಚ್ಚುವರಿ ಪರಿಣತಿಯನ್ನು ಪಡೆದರು.

ಡಾ। ರವಿಶಂಕರ್ ಮತ್ತು ಡಾ। ಉಮಾ ಅವರು 1995ರಲ್ಲಿ ಮೈಸೂರಿನಲ್ಲಿ ಉಷಾ ಕಿರಣ್ ಕಣ್ಣಿನ ಆಸ್ಪತ್ರೆ ಮತ್ತು ಟ್ರಸ್ಟ್‌ಗಳನ್ನು ಸ್ಥಾಪಿಸಿ 22 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ. ಇದರಲ್ಲಿ ಸಾವಿರಾರು ಮಂದಿ ಹಣಕಾಸಿನ ತೊಂದರೆ ಉಳ್ಳವರಿಗೆ ಉಚಿತವಾಗಿ ಚಿಕಿತ್ಸೆ ನೀಡಿ ಅವರ ಬಾಳಿಗೆ ಬೆಳಕು ತಂದಿದ್ದಾರೆ. ಉಷಾ ಕಿರಣ್ ಛಾರಿಟಬಲ್ ಟ್ರಸ್ಟ್ ಮೂಲಕ ಮೈಸೂರು, ಮಂಡ್ಯ ಮತ್ತೆ ಕೊಡಗು ಜಿಲ್ಲೆಗಳ ಹಲವಾರು ಸ್ಥಳಗಳಲ್ಲಿ ಉಚಿತ ವೈದ್ಯಕೀಯ ತಪಾಸಣೆ ಮತ್ತು ಶಸ್ತ್ರಚಿಕಿತ್ಸೆ ನಡೆಸಿದ್ದಾರೆ.

ಕಳೆದ ತಿಂಗಳು, ಅಂತರ ರಾಷ್ಟ್ರೀಯ ಸಂಸ್ಥೆ ಐ.ಎ.ಪಿ.ಬಿ. (ಇಂಟರ್ ನ್ಯಾಷನಲ್ ಏಜೆನ್ಸಿ ಫಾರ್ ಪ್ರಿವೆನ್ಷನ್ ಆಫ್ ಬ್ಲೈಂಡ್‌ನೆಸ್) ಯು ಡಾ। ಉಮಾ ಅವರ 20ಕ್ಕೂ ಹೆಚ್ಚಿನ ವರ್ಷಗಳ ಸೇವೆಯನ್ನು ಗಮನಿಸಿ "ಐ ಹೆಲ್ತ್ ಹೀರೋ–2017" ಪ್ರಶಸ್ತಿಯನ್ನು ಕಠ್ಮಂಡುವಿನಲ್ಲಿ ನಡೆದ ಸಮಾರಂಭದಲ್ಲಿ ನೀಡಿ ಗೌರವಿಸಿತು. ಡಾ। ರವಿಶಂಕರ್ ಮತ್ತು ಡಾ। ಉಮಾ ಅವರು ಹಲವು ಬಾರಿ ಆಫ್ರಿಕಾದ ಗಾಂಬಿಯಾ ಮತ್ತು ನಮ್ಮ ನೆರೆಯ ನೇಪಾಳ, ಬಾಂಗ್ಲಾದೇಶಗಳಲ್ಲಿ ಆಹ್ವಾನಿತರಾಗಿ ಅಲ್ಲಿ ಸೌಲಭ್ಯಗಳಿಂದ ವಂಚಿತರಾದ ನೂರಾರು ಕಣ್ಣಿನ ರೋಗಿಗಳಿಗೆ ಚಿಕಿತ್ಸೆ ಹಾಗೂ ಅಲ್ಲಿಯ ವೈದ್ಯರಿಗೆ ಹೆಚ್ಚುವರಿ ತರಬೇತಿ ಕೊಟ್ಟಿದ್ದಾರೆ ಹಾಗೇ ಮರ್ಸಿ ಶಿಪ್‌ಗಳಲ್ಲೂ ಕೂಡ ಚಿಕಿತ್ಸೆ ನಡೆಸಿದ ಹೆಗ್ಗಳಿಕೆ ಇವರದು.

ಡಾ। ರವಿಶಂಕರ್ ಮತ್ತು ಡಾ। ಉಮಾ ಇವರ ಅವಳಿಮಕ್ಕಳು ಹಂಸಿನಿ ಮತ್ತು ಶ್ರೇಯಸ್ ಇಬ್ಬರೂ ಇಂಜಿನಿಯರಿಂಗ್ ಪದವಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದಾರೆ. ದೃಷ್ಟಿದಾನವನ್ನು ವ್ರತದಂತೆ ನಡೆಸುತ್ತಿರುವ ವೈದ್ಯ ದಂಪತಿಗಳು ಹಾಗೂ ಅವರ ಕುಟುಂಬವರ್ಗಕ್ಕೆ ಈ ಶುಭಸಂದರ್ಭದಲ್ಲಿ ಪತ್ರಿಕೆ ಶುಭಕೋರುತ್ತದೆ.